ಅರಬಿಸ್ತಾನದಲ್ಲಿ ಎಂತೆಂತಹ ಕುಟ್ಟಗಳು ಬೇಕಾದರೂ ಸಿಗುತ್ತವೆ. ನಿನ್ನ ಮಾಪಿಳ್ಳೆಯನ್ನು ಒಪ್ಪಿಸಿ ಅಲ್ಲೇ ಒಂದು ಆಡಿನ ಮರಿಯನ್ನು ಕೊಳ್ಳುವಿಯಂತೆ.”

ಅಲಿಮಾಳಿಗೆ ಸಮಾಧಾನವಾಯಿತು.

ಅಂದು ಬೆಳಗ್ಗೆ ಕುಟ್ಟ ಕಟ್ಟಿ ಹಾಕಲು ಸಿಗಲೇ ಇಲ್ಲ. ಅಲಿಮಾ ಜೊತೆ ಮದರಸಕ್ಕೆ ಹೊರಟಿತು. ಅವಳು ಎಷ್ಟು ಕಲ್ಲೆಸೆದರೂ ಅದು ಹಿಂದಕ್ಕೆ ಹೋಗಲಿಲ್ಲ. ಅಷ್ಟು ಕಲ್ಲೆಸೆದರೂ ಒಂದೇ ಒಂದು ಅದಕ್ಕೆ ತಾಗಲಿಲ್ಲ! ಅದು ಅವಳ ಜೊತೆ ಓತಿನ ಕ್ಲಾಸಿಗೂ ಬಂದು ಬಿಟ್ಟಿತು. ಬೆಂಚಲ್ಲಿ ಕೂತಿದ್ದ ಅವಳ ಕೆನ್ನೆ ನೆಕ್ಕಿದಾಗ ಅವಳ ಸುತ್ತಮುತ್ತ ಇದ್ದ ಮಕ್ಕಳೆಲ್ಲಾ ನಕ್ಕರು. ಅವಳಿಗೆ ತುಂಬಾ ನಾಚಿಕೆಯಾಗಿ ಕುಟ್ಟನಿಗೊಂದು ಬಿಗಿಯಬೇಕೆಂದು ಅಡಿಕೋಲಿಗಾಗಿ ಚೀಲವನ್ನು ತಡಕಾಡಿದಳು. ಅಷ್ಟರಲ್ಲಿ ಮಕ್ಕಳ ಗಲಾಟೆ ಕೇಳಿ ಧಿಮಿಗುಡುವ ಮುಖದ ಮುಕ್ರಿಚ್ಚ ಬಂದೇ ಬಿಟ್ಟ. ಬಾಹುಬಲಿಯ ಪೋಸು ಕೊಟ್ಟು ನಿಂತಿದ್ದ ಕುಟ್ಟ ಕುರುಚಲು ಗಡ್ಡದ ಮುಕ್ರಿಚ್ಚನ ಕಣ್ಣಿಗೆ ಬಿದ್ದ. ‘‘ಈ ಹರಾಮು ಇಲ್ಲಿಗೆ ಯಾಕೆ ಬಂತು?” ಎಂದು ಸಿಟ್ಟಿನಿಂದ ಮುಕ್ರಿಚ್ಚ ಮುಷ್ಟಿಯಲ್ಲಿ ಅದರ ಹೊಟ್ಟೆಗೆ ಬಲವಾಗಿ ಗುದ್ದಿದ. ಕುಟ್ಟ ನೋವಿನಿಂದ ‘ಮೇss’ ಎಂದು ಅರಚಿದವನು ಕೋಪದಿಂದ ಮುಕ್ರಿಚ್ಚನ ಕಾಲಿಗೆ ಬಲವಾಗಿ ಡೀ ಕೊಟ್ಟನು. ಮುಕ್ರಿ ಆಯತಪ್ಪಿ ಕೆಳಗೆ ಬಿದ್ದ. ಆ ಗೊಂದಲದಲ್ಲಿ ಅವನ ಪಂಚೆ ಬಿಚ್ಚಿ ಹೋಗಿ ಮಕ್ಕಳಿಗೆ ಅವನ ಪಟಾಪಟ್ ಅಂಡರ್‌ವೇರ್‌ನ ದರ್ಶನವಾಗಿ ಅವರೆಲ್ಲಾ ಗೊಳ್ಳೆಂದು ನಕ್ಕರು. ಅಪಮಾನ ಮತ್ತು ನಾಚಿಕೆಯಿಂದ ಕೋಪೋದ್ರಿಕ್ತನಾದ ಮುಕ್ರಿಚ್ಚ, “ಸೈತಾನನಿಗೆ ಹುಟ್ಟಿದವರೇ, ನನ್ನನ್ನು ನೋಡಿ ನಗ್ತೀರಾ? ಇವತ್ತು ನಿಮಗೆ ಓತಿನ ಕ್ಲಾಸೇ ತೆಗೆದುಕೊಳ್ಳುವುದಿಲ್ಲ ನೋಡಿ” ಎಂದು ಹೆದರಿಸಿಬಿಟ್ಟ. ಮುಕ್ರಿಚ್ಚನ ಬಾಯಿಯಿಂದ ಆ ಮಾತು ಹೊರಬಿದ್ದಂತೆ ಮಕ್ಕಳೆಲ್ಲಾ ಚೀಲ ಎತ್ತಿಕೊಂಡು ತಮ್ಮ ತಮ್ಮ ಮನೆಗಳಿಗೆ ಓಟಕಿತ್ತರು. ತಾನು ನಿಂತರೆ ಮುಕ್ರಿಚ್ಚ ತನಗೆ ನಾಗರಬೆತ್ತದಿಂದ ಬಿಗಿಯುವುದು ನಿಶ್ಚಯವೆಂದು ಅಲಿಮಾಳು ಚೀಲ ಎತ್ತಿಕೊಂಡು ಹೊರಗೆ ಓಡಿದಳು. ಕೆಳಗೆ ಬಿದ್ದಲ್ಲಿಂದ ಏಳಲಾಗದ ಮುಕ್ರಿಚ್ಚನ ಗಡ್ಡವನ್ನು ಕಚ್ಚಿ ಎಳೆದು, ಮತ್ತೊಂದು ಡೀ ಕೊಟ್ಟು ‘ಮೇss’ ಎನ್ನುತ್ತಾ ಅಲಿಮಾಳನ್ನು ಕುಟ್ಟ ಹಿಂಬಾಲಿಸಿದ. ಬೆಳಗಿನ ತಿಂಡಿ ತಿಂದು, ಕೆಲಸಕ್ಕೆ ಹೊರಡಲು ಸಿದ್ಧರಾಗಿದ್ದ ಭಾವ ಬಾಗಿಲು ತೆಗೆದು ಹೊರ ಬರುವಾಗ ಅಲಿಮಾ ಓಡುತ್ತಾ ಬಂದಳು. ಹಿಂದಿನಿಂದ ಕುಟ್ಟನೂ ಇದ್ದ. “ಏನಿವತ್ತು ಓತು ಇಲ್ಲವಾ” ಎಂದು ಭಾವ ಗಾಬರಿಯಿಂದ ಕೇಳುವಾಗ ಮುಕ್ರಿಚ್ಚನ ಲಟಾರಿ ಸ್ಕೂಟರ್ ಹೆಲಿಕಾಪ್ಟರಿನ ಶಬ್ದ ಹೊರಡಿಸುತ್ತಾ ಅವರ ಬಳಿ ಬಂದು ನಿಂತಿತು. “ನಿಮ್ಮ ಅಲಿಮಾಳಿಗೆ ಕೆಟ್ಟ ಜಿನ್ನು ಹಿಡಿದಿದೆ. ಅದಲ್ಲದಿದ್ದರೆ ಮದರಸಕ್ಕೆ ಆಡನ್ನು ಕರಕೊಂಡು ಬರುತ್ತಿರಲಿಲ್ಲ. ಆ ಆಡಿಗೆ ಸೈತಾನ ಹಿಡಿದಿದೆ. ನನ್ನನ್ನೇ ಗುದ್ದಿ ಕೆಡವಿ ಹಾಕಿತ್ತು. ನನ್ನ ಗಡ್ಡಕ್ಕೆ ಬಾಯಿ ಹಾಕಿ ಕಚ್ಚಿ ಎಳೆಯಿತು. ಮಕ್ಕಳೆದುರು ನನ್ನ ಪಂಚೆ ಬಿಚ್ಚಿ ಹೋಗಿ ಮಾನ ಹರಾಜಾಯಿತು. ಹೀಗಾದರೆ ನಾನು ಮದರಸವನ್ನು ಮುಚ್ಚಿಬಿಡಲು ಜಮಾತಿನವರಿಗೆ ಹೇಳಿ ಬಿಡುತ್ತೇನೆ” ಎಂದು ಆವೇಶದಿಂದ ಹೇಳಿದ. ಮದರಸ ಮುಚ್ಚಿದರೆ ಬೆಳಗ್ಗೆ ಬೇಗ ಏಳುವುದು ತಪ್ಪುತ್ತದೆ ಎಂದು ಅಲಿಮಾ ಒಳಗೊಳಗೇ ಖುಷಿಪಟ್ಟಳು. ಭಾವ ಮಾತ್ರ ಗಾಬರಿಯಿಂದ, “ಮುಕ್ರಿ ಸಾಹೇಬರು ಮನ್ನಿಸಬೇಕು. ಏನೋ ಪರಮೋಶ. ಬುದ್ಧಿ ಇಲ್ಲದ ಆಡು ಮಾಡಿದ ಅನಾಹುತಕ್ಕೆ ನೀವು ಜಮಾತಿನ ಮಕ್ಕಳಿಗೆ ಅಂತಹ ಶಿಕ್ಷೆ ನೀಡುವುದೇ. ಆಯಿತು. ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು” ಎಂದು ಭರವಸೆ ನೀಡಿದರು.

ಅಷ್ಟಕ್ಕೂ ಸಮಾಧಾನಗೊಳ್ಳದ ಮುಕ್ರಿಚ್ಚ ಅಲಿಮಾಳ ಬಳಿಗೆ ಬಂದು ಅವಳ ಕಿವಿ ಹಿಂಡಿ ಮೇಲಕ್ಕೆತ್ತಿ, “ಕೆಟ್ಟ ಜಿನ್ನು ಹಿಡಿದವಳೇ, ಇನ್ನೊಮ್ಮೆ ನಿನ್ನ ಕುಟ್ಟ ಆಡು ಮದರಸಕ್ಕೆ ಬಂದರೆ ಬಕ್ರೀದಿನಂದು ನಿನ್ನ ಬಕರಾವನ್ನು ಬಿಸ್ಮತ್ ಕೂಟಿ ಬೇಯಿಸಿ ಬಿಡ್ತೇನೆ” ಎಂದು ಅಬ್ಬರಿಸಿದ. ಅಲಿಮಾ ನೋವಿನಿಂದ ‘ಅಲ್ಲಾ, ಅಲ್ಲಾ’ ಎಂದು ನರಳಿದಳು. ಎಲ್ಲವನ್ನೂ ನೋಡುತ್ತಿದ್ದ ಕುಟ್ಟ ಓಡಿ ಬಂದವನೇ ಮುಕ್ರಿಚ್ಚನಿಗೆ